ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಜಪ್ತಿ ಆದ ಸ್ವತ್ತಿನ ತಪ್ಶೀಲ್.	ಜೋಡಿ ನಂಬ್ರ ತಪ್ಶೀಲ್.	ವಿಸ್ತೀರ್ಣ.	ಸರಕಾರಕ್ಕೆ ಬರತಕ್ಕ ಜೋಡೀ ಸೊಲೂಲಗನ.	ಸರಕಾರಕ್ಕೆ ಬರಬೇಕಾದ ಬಾಕಿ ಸೊಲೂಲಗನ.	ಹರಾಜು ತಾರೀಖು.	ಷರಾ.
1	2	3	4	5	6	7	8	9	10	11
							ರೂ. ಆ. ಪೈ.	ರೂ. ಆ. ಪೈ.		
ಬೆಂಗಳೂರು.	ಕೃಷ್ಣರಾಜಪುರ.	ಜೋಡಿ ಕಲ್ಲುಕೆರೆ.	ರಾಮಯ್ಯನ ಹೆಂಡತಿ ಸೀತಮ್ಮ	ವೃತ್ತಿ I	ಜೋಡಿ	..	8 8 3	20 13 8	ಹರಾಜ್ ತಾರೀಖು 1896ನೇ ಇಸವಿ ಜುಲೈ 27ರಲ್ಲು	ಜೋಡಿ ರೂಪಾಯಿ 8—8—3

ತಾಕು I ಖುಷ್ಕಿ 3 ಕೊಳಗ.
ಪೂರ್ವಕ್ಕೆ —ನಂಜಪ್ಪನ ಜಮೀನು
ಪಶ್ಚಿಮಕ್ಕೆ —ಮುನಿಕಾಮಿ ಜಮೀನು
ಉತ್ತರಕ್ಕೆ —ಗಂಗಾಧರಯ್ಯನ ಜಮೀನು
ದಕ್ಷಿಣಕ್ಕೆ —ಅಪ್ಪುರಾಯಪ್ಪನ ಜಮೀನು

ತಾಕು II ಖುಷ್ಕಿ ಕೊಳಗ 3.
ಪೂರ್ವಕ್ಕೆ —ಅಪ್ಪುರಾಯಪ್ಪನ ಜಮೀನು
ಪಶ್ಚಿಮಕ್ಕೆ —ಕೊಮಾರಯ್ಯನ ಜಮೀನು
ಉತ್ತರಕ್ಕೆ —ಅಪ್ಪುರಾಯಪ್ಪನ ಜಮೀನು
ದಕ್ಷಿಣಕ್ಕೆ —ಜಾರಕಬಂಡೆ

ತಾಕು III ತರೀ 12 ಕೊಳಗ.
ಪೂರ್ವಕ್ಕೆ —ಅಮಾನೀ ಹುವ್ವಿನ ಅಣಕೆರೆ
ಪಶ್ಚಿಮಕ್ಕೆ —ನೀರಗಂಟಿ ಇನಾಂತಿ, ರಾಮಚಂದ್ರಯ್ಯನ ಜಮೀನು
ಉತ್ತರಕ್ಕೆ —ರಾಮಾಪಂಡಿತ ವಗೈರೇರ ಜಮೀನು
ದಕ್ಷಿಣಕ್ಕೆ —ನಾರಿವಾಳ

ತಾಕು IV ಖುಷ್ಕಿ ಪಡಿ 2.
ಪೂರ್ವಕ್ಕೆ —ಜಮಾಯರ ಕಣ, ಕೃಷ್ಣರಾಜಪುರದ ದಾರಿ
ಪಶ್ಚಿಮಕ್ಕೆ —ದಂಡಿನ ದಾರಿ
ಉತ್ತರಕ್ಕೆ —ನಿಲುಕಲ್ಲು
ದಕ್ಷಿಣಕ್ಕೆ —ಶಾಮರಾಯರ ಕಣ ಮತ್ತು ನಂಜಪ್ಪನ ಕಣ

ತಾಕು V ವಠಾರ.
ಪೂರ್ವಕ್ಕೆ —ಹಜಾಮರ ಮನೆ
ಪಶ್ಚಿಮಕ್ಕೆ —ಗಂಗಾಧರಯ್ಯ, ಸೀತಾರಾಮಯ್ಯನ ವಠಾರ
ಉತ್ತರಕ್ಕೆ —ಬೀದಿ
ದಕ್ಷಿಣಕ್ಕೆ —ಓಲಿ

ತಾಕು VI
ಪೂರ್ವಕ್ಕೆ —ಮಾರಗೊಂಡಹಳ್ಳಿ ಯಲ್ಲೆ
ಪಶ್ಚಿಮಕ್ಕೆ —ಅಗರದ ಯಲ್ಲೆ
ಉತ್ತರಕ್ಕೆ —ಬಿಳೇನಹ್ಯರ ಯಲ್ಲೆ
ದಕ್ಷಿಣಕ್ಕೆ —ಕಾದೇನಹಳ್ಳಿ ಯಲ್ಲೆ

ಈ ಮಧ್ಯೆ ಗ್ರಾಮದಲ್ಲಿ ವೃತ್ತಿವಾರ್ ಹಂಚಿಕೆ ಆದ್ದು ಜಾತಾ ವುಳದ್ದುದಾಮಾ ಷಾಯಿ ಮೇರಿಗೆ ಈ ವೃತ್ತಿಗೆ ಸಲ್ಲತಕ್ಕದ್ದು ಸಹ

ಕೆ. ಶ್ರೀನಿವಾಸರಾವ್,
ಛಾರ್ ಡೆಪ್ಯೂಟಿ ಕಮ್ಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 1ನೇ ಜುಲೈ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಬೆಂಗಳೂರು ಡಿಸ್ಟ್ರಿಕ್ಟು ನೆಲವಂಗಲದ ತಾಲ್ಲೂಕು ಗ್ರಾಮಾಂತ್ರಗಳಲ್ಲಿರುವ ಕುರಂಗದ ಕಲ್ಲು ದುರ್ಮುಖಿಸಂವತ್ಸರದ ಬಾಬನ್ನು, 1896ನೇ ಇಸವಿ ಆಗಸ್ಟು ತಾರೀಖು 10ರಲ್ಲಿ ಹರಾಜ್ ಮಾಡಲ್ಪಡುತ್ತೆ.

(2.) ಈ ಬಾಬತು ಹರಾಜ್ ತಾಲ್ಲೂಕು ಕಚೇರಿಯಲ್ಲಿ ದಿವಿ 11 ಘಂಟೆಗೆ ಅಮಲ್ದಾರ್ರು ಅಥವಾ ಶಿರಸ್ತೇದಾರ್ರು ಮಾಡಿಸುತ್ತಾರೆ.

(3.) ಇಜಾರೆಯು ಪ್ರತಿಸಾಲ್ ಜುಲೈ ಲಾಗಾಯತು ಒಂದು ವರುಷದ ವರಿವಿಗೆ ಇರತಕ್ಕದ್ದು.

(4.) ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಇತರರಿಗೋಸ್ಕರ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು. ಏಜಂಟರು ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಿ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆಯನ್ನು ಹಾಜರ್ಪಡಿಸಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

(5.) ಜಡಸವಾಲ್ದಾರನು ಹರಾಜ್ ಕಾಲದಲ್ಲಿ ತನ್ನ ಸವಾಲ್ ಅಂಗೀಕರಿಸಲ್ಪಟ್ಟ ಕೂಡ್ಲೆ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿ ಪ್ರಕಾರ ಡಿಪಾಜಿಟ್ ಹಾಜರ್ಪಡಿಸಬೇಕು. ಬಾಕಿ ಮೊಬಲಗನ್ನು ರೂಪಾಯಿ 1ಕ್ಕೆ 1 ಆಣೇ ಮೇರೆ ಲೋಕಲ್‌ಸೆಸ್ ಸಹಿತ ಹರಾಜ್ ಖಾಯಂ ಆದ ಸಂಗತಿ ಬರಹ ಮೂಲಕ ಅಮಲ್ದಾರ್ರವರಿಂದ ತಿಳಿಸಲ್ಪಟ್ಟ ತಾರೀಖು ಲಾಗಾಯತು 7 ದಿವಸದಲ್ಲಿ ಪಾವತಿ ಮಾಡಬೇಕು. ಡಿಪಾಜಿಟ್ ಕಟ್ಟುವದಕ್ಕೂ ಅಥವಾ ಬಾಕಿ ಮೊಬಲಗನ್ನು ಪಾವತಿ ಮಾಡುವದಕ್ಕೂ ತಪ್ಪಿದರೆ ಈ ಬಾಬು ಪುನಹ ಹರಾಜ್ ಮಾಡಲ್ಪಟ್ಟು ಆದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಸವಾಲ್ದಾರನನ್ನು ಗುರಿಮಾಡಲ್ಪಡುತ್ತೆ.

(6.) ಇಜಾರೆದಾರನು ಹಿಡುವಳಿ ಜಮೀನಿನಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನು ಆಯಾ ಹಿಡುವಳಿದಾರನ ಅನುವತಿ ವಿನಹ ಆರಿಸಿಕೊಳ್ಳಕೂಡದು. ತಮ್ಮ ಹಿಡುವಳಿ ಜಮೀನಿನಲ್ಲಿ ಇರತಕ್ಕ ಕಲ್ಲುಗಳು ಜಮಾಯಿಸಿಕೊಳ್ಳುವದಕ್ಕಾಗಲಿ ಅಥವಾ ಇಜಾರೆದಾರನಿಗೇ ವಿನಹ ಇತರರಿಗೆ ಮಾರುವದಕ್ಕೆ ಆಗಲಿ ಹಿಡುವಳಿದಾರರಿಗೆ ಅಧಿಕಾರವಿರುವದಿಲ್ಲ.

(7.) ಇಜಾರೆದಾರನು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆಟಂಕ ಪಡಿಸಕೂಡದು.

(8.) ಹಿಡುವಳಿಯಲ್ಲಿ ಇಲ್ಲದ ಜಮೀನುಗಳನ್ನು ಸರಕಾರದವರು ವರಖಾಸ್ತುಗಳು ಬಂದಾಗ ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರನ ಅಭ್ಯಂತರವೇನೂ ಇರುವದಿಲ್ಲ. ಮತ್ತು ಅಂಥಾ ಜಮೀನುಗಳಲ್ಲಿ ಶಿಕ್ಕುವ ಕುರಂಗದ ಕಲ್ಲುಗಳನ್ನು ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

(9.) ಕಲ್ಲುಗಳನ್ನು ಜಮಾಯಿಸುವದಕ್ಕಾಗಿ ಜಮೀನುಗಳನ್ನು ಇಜಾರೆದಾರನು ಅಗಿಯಕೂಡದು. ಬಂದು ವೇಳೆ ಆಗದರೆ, ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನು ಮುಚ್ಚಿ ಸರಪಡಿಸಬೇಕು.

(10.) ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಇಪ್ಪು ಮಣ ಕಲ್ಲು, ಮತ್ತು ಅದು ರಫ್ತಾಗುವ ಸ್ಥಳ ಈ ತಪ್ಸೀಲ್ ಕಂಡು ತಾಲ್ಲೂಕು ಅಮಲ್ದಾರ್ರಿಂದ ವಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನು ಇಜಾರೆದಾರ್ರು ಸಾಗಿಸಕೂಡದು.

ವಿ. ಎಸ್. ನರಸುಂಹಯ್ಯಂಗಾರ್,
ಡೆಪ್ಯೂಟಿ ಕಮ್ಮಿಷನರ್.

ಬೆಂಗಳೂರ್ ಸಿಟಿ ಮ್ಯುನಿಸಿಪಲ್ ಬೋರ್ಡಿನಿಂದ.

ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮ್ಯುನಿಸಿಪಾಲಿಟಿಯಲ್ಲಿ ನಡಿಯುತಕ್ಕ ಕಾಂಗಾರಿಗಳನ್ನು ಮಾಡಿಸುವ ಬಗ್ಯಾಗಲಿ ಸಾಮಾನುಗಳನ್ನು ಅಂದರೆ ಮೆಟೀರಿಯಲ್ ಟೂಲ್ಸ್ ಮೊದಲಾದವುಗಳನ್ನು ಸಪ್ಲೈ ಮಾಡತಕ್ಕ ಬಗ್ಯಾಗಲಿ ವುದ್ಯುಕ್ತರಾದ ಜನರು ಮತ್ತು ಸಪ್ಲೈ ಮಾಡುತಿರುವವರುಗಳ ಹೆಸರುಗಳನ್ನು ಅಡ್ರೆಸ್‌ಗಳನ್ನು ಮ್ಯುನಿಸಿಪಾಲ್ ಹೆಡ್ ಆಫಿಸಿನಲ್ಲಿ ಇಡಲ್ಪಟ್ಟು ಇರುವ ಬುಕ್ಕಿನಲ್ಲಿ ರಿಜಸ್ಟರ್ ಮಾಡಿಸತಕ್ಕದ್ದಿದೆ.

ಆಫಿಸ್ ಹಗಲು 11ರ ಲಾಗಾಯಿತು 5—30ರ ವರುವಿಗೆ ತೆರದು ಯಿರುವದು.

ಬೆಂಗಳೂರು ಸಿಟಿ ಮ್ಯುನಿಸಿಪಾಲ್ ಪ್ರಸೀಡೆಂಟರವರಲ್ಲಿಗೆ ಕೊಡುವ ಅರ್ಜಿಗಳಿಗೆ ಆಗುವ ಜವಾಬುಗಳನ್ನು ಸುಲಭವಾಗಿ ತಿಳಿದುಕೊಳ್ಳುವ ಬಗ್ಯೆ ಅರ್ಜಿದಾರ್‌ಗಳಿಗೆ ಯಿದರಿಂದ ತಿಳಿಯಪಡಿಸುವದೇನಂದರೆ:—

ಅರ್ಜಿಗಳು ಕೊಟ್ಟಬಳಿಕ 8 ದಿವಸಗಳ ವರಿವಿಗೂ ಜವಾಬ್ ತಲಪದೆ ಯಿದ್ದಲ್ಲಿ ಅರ್ಜಿದಾರ್‌ಗಳು ನಮ್ಮ ಆಫಿಸ್ ಮ್ಯಾನೇಜರರ ರೂಬರೂಬ್ ಹಾಜರಾಗಿ ಜವಾಬುಗಳನ್ನು ತಗದುಕೊಳ್ಳತಕ್ಕದ್ದು. ಬಂದು ವೇಳೆ ಅರ್ಜಿಗಳಿಗೆ ಜವಾಬ್ ಆಗದೆ ಇದ್ದಪಕ್ಷದಲ್ಲಿ ಅರ್ಜಿದಾರ್ರು ಆ ಸಂಗತಿಯನ್ನು ಕೂಡ್ಲೆ ಪ್ರಸೀಡೆಂಟರವರ ಬಳಿ ರೂಬರೂ ಹಾಜರಾಗಿ ತಿಳಿಯಪಡಿಸತಕ್ಕದ್ದು.

ಅರ್ಜಿಗಳು ಫೈಸಲಾದ ತಾರೀಖು ತಿಳಿಸಲು ಒಂದು ಮಿಮೋ ತಪೂರ್ಮಾಡಿ ಮ್ಯುನಿಸಿಪಾಲ್ ಆಫಿಸಿನಲ್ಲಿ ಚಿಕಟ್ಟುಯಿಸಲ್ಪಡುವದು.

ತಾರೀಖು 18ನೇ ಮೇ 1896.